# ಎತ್ತ ನಿಂತರೇನು...

ಹೇ...
ಬಾರಣ್ಣ, ನೀನೂ ಕೈ ಜೋಡಿಸು ಚೂರು
ಕೈ ಕೆಸರಾದರೆ ಬಾಯಿ ಮೊಸರು
ಮೈ ದಂಡಿಸಿ ದುಡಿಯೋಣ ನಾವೆಲ್ಲರೂ

ಎತ್ತ ನಿಂತರೇನು ಬದುಕಿನ ಚಿತ್ತ ಒಂದೇ
ಎತ್ತಿ ಇಟ್ಟರಷ್ಟೇ; ಕೈ ತುಂಬ ದುಡಿಮೆ,
ಕಣ್ ತುಂಬ ನಿದ್ದೆ

ಒಬ್ಬರೇ ಎತ್ತಲಾಗುವುದಿಲ್ಲ;
ಇದು ಬದುಕ ಚಪ್ಪಡಿ
ಯಾರ ಕೈ ಜಾರಿದರೂ ಮುಗಿಯಿತು
ಕಾಲ ಹೆಬ್ಬೆರಳು ಪುಡಿಪುಡಿ

ದುಡಿಮೆಗಿಲ್ಲ ಯಾವುದೇ ನೆರಳು
ಒಬ್ಬರಿಗೊಬ್ಬರು ಕೊಡಬೇಕು ಹೆಗಲು
ಕೆಲಸ ಬೇಗ ಮುಗಿಸಿ ಮನೆಗೆ ಮರಳಲು

**-ಕಿರಣ ನಾಯ್ಕನೂರ**

# ದುಡಿಮೆ

ದುಡಿಯುವ ಕೈಗಳ ಅಳಿಸಿದ ದರೇಖೆಯು
ಜೋಡಿಸುವ ಕನಸುಗಳೆಷ್ಟೋ..
ಎತ್ತುವ ಭುಜಗಳ ಬಳಲಿದ ಕಾಲುಗಳ
ನಂಬಿದ ಜೀವಗಳೆಷ್ಟೋ...

ಬದುಕುವ ಪ್ರಯತ್ನವೂ ಗಲ್ಲುವ ಹಂಬಲವೂ
ಬೆವರಿನಬಾಳಲ್ಲಿ ... ಸೋಲೋ ಗೆಲುವೋ..
ಒಂದಂತೂ ಅರಿತವರಿವರು
'ದುಡಿಮೆಯೆ ದುಡ್ಡಿನ ತಾಯಿ'

ಹೊಸಚಿಗುರು ಹಳೆಬೇರು ಕೂಡಿ
ಸೊಗಸಾದ ಮರದಂತೆ
ಹರೆಯವೂ ಮುದಿತನವೂ ಇಲ್ಲಿ
ಒಗ್ಗಟ್ಟಿನ ಸಂಬಂಧವೂ

ಕಾಣದ ಕೈಗಳ ನೋವಿನ ಫಲವು
ರುಚಿಯಾಗಿ ಸವಿಯಾಗಿ ಹಿತವಾಗಿರಲಿ
ಜೀವನವು ಸಾಗುತಲಿರಲಿ...

**-ಹರ್ಷಾ ಸಿ.**

